## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.165-2022

ದೋ.ಸಾ. 10
ಫ್ರಾ.ಸಾ. 11
ಪ್ರ.ವ.ಬೊ.ದಿನಾಂಕ. 19-11-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಶಶಿಕುಮಾರ |
| ತಂದೆ / ಗಂಡನ ಹೆಸರು | - | ರಾಜಣ್ಣ |
| ವಯಸ್ಸು | - | 46 |
| ಉದ್ಯೋಗ | - | ಚಾಲಕ, ಟ್ರಾಫಿಕ್ ಸಿಪಿಐ, ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಕಳೆದ ಮೂರು ವರ್ಷದಿಂದ ದಾವಣಗೆರೆಯ ಟ್ರಾಫಿಕ್ ಸಿಪಿಐ ರವರಿಗೆ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ಆ ಪೂರ್ವದಲ್ಲಿ ದುರ್ಗಾ ಪಡೆಯ ವಾಹನದ ಚಾಲಕನಾಗಿ ದಾವಣಗೆರೆಯಲ್ಲಿ ಕೆಲಸ ಮಾಡುತ್ತಿದ್ದೆ. ಈ ಪ್ರಕರಣಕ್ಕೆ ಸಂಬಂಧಿಸಿ ದಿಃ 16-10-2020 ರಂದು ಮದ್ಯಾಹ್ನ 2-00 ಗಂಟೆ ಸಮಯದಲ್ಲಿ ನಾನು ಮನೆಗೆ ಹೋಗುತ್ತಿದ್ದು, ತ್ರಿಶೂಲ್ ಟಾಕೀಸಿನ ಬಳಿ ಬಂದ ಸಮಯದಲ್ಲಿ ಅಲ್ಲಿ ಜನ ಗುಂಪಾಗಿ ನಿಂತಿರುವುದನ್ನು ನೋಡಿರುತ್ತೇನೆ. ನಂತರ ನೋಡಿದಾಗ ಫ್ರಾ.ಸಾ.1 ರವರು ನೆಲದ ಮೇಲೆ ಬಿದ್ದಿರುವುದು ಕಂಡುಬಂದಿರುತ್ತದೆ. ನಾನು ಗಮನಿಸಿದಾಗ ಅವರ ಬೆನ್ನಿನ ಮೇಲೆ ರಕ್ತಗಾಯವಾಗಿದ್ದು, ಅಲ್ಲದೇ ರಕ್ತವು ನೆಲದ ಮೇಲೆ ಕೂಡ ಬಿದ್ದಿರುವುದು ಕಂಡುಬಂದಿರುತ್ತದೆ. ನಂತರ ನಾನು ಫ್ರಾ.ಸಾ.1 ರವರ ಹೆಸರನ್ನು ಆತನ ಬಳಿ ಕೇಳಿ ತಿಳಿದುಕೊಂಡಿರುತ್ತೇನೆ. ನಾನು ಹೋಗುತ್ತಿರುವಾಗ 2 ನೇ ಆರೋಪಿಯು ಫ್ರಾ.ಸಾ.1 ರವರ ಕೈಯನ್ನು ಹಿಡಿದುಕೊಂಡಿದ್ದು, ರಾಜು ಎನ್ನುವವರು ಚಾಕುವಿನಿಂದ ಬೆನ್ನಿಗೆ ಚುಚ್ಚಿ ನಂತರ ಅಲ್ಲಿಂದ ಓಡಿಹೋಗಿರುತ್ತಾರೆ. ನಂತರ ನಾನು ಒಂದು ಆಟೋ ಕರೆಯಿಸಿ ಅದರ ಮೂಲಕ ಫ್ರಾ.ಸಾ.1 ರವರನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ನಾನು ಫ್ರಾ.ಸಾ.1 ರವರನ್ನು ಕೇಳಿದಾಗ ಆತ ಪ್ರೀತಿಸುತ್ತಿದ್ದ ಹುಡುಗಿಯ ವಿಚಾರಕ್ಕೆ ಸಂಬಂಧಿಸಿ ಆಕೆಯ ಮಾವ 1 ನೇ ಆರೋಪಿಯು ಈ ಕೃತ್ಯ ಎಸಗಿದ್ದಾನೆ ಎಂದು ನನ್ನ ಬಳಿ ಹೇಳಿರುತ್ತಾನೆ.

ನಂತರ ದಿಃ 17-10-2020 ರಂದು ಘಟನಾ ಸ್ಥಳಕ್ಕೆ ಪೋಲೀಸರು ಪಂಚನಾಮೆಗಾಗಿ ಕರೆಯಿಸಿದ್ದರು. ನಂತರ ನಾನು ಅಲ್ಲಿಗೆ ಹೋದಾಗ ಫ್ರಾ.ಸಾ.8 ಮತ್ತು 9 ರವರ ಸಮಕ್ಷಮದಲ್ಲಿ ಪೋಲೀಸರು ಪಂಚನಾಮೆಯನ್ನು ಬರೆದು ಮು.ಮಾ.8 ಮತ್ತು 10 ನ್ನು ಸ್ವಾಧೀನಪಡಿಸಿಕೊಂಡು ನಿ.ಪಿ.19 ಮತ್ತು 20 ರಂತೆ ಪೋಟೋ ತೆಗೆದು, ನಿ.ಪಿ.18 ರಂತೆ ಪಂಚನಾಮೆಯನ್ನು ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿ.ಪಿ.18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.18(ಸಿ) ಎಂದು ಗುರುತಿಸಲಾಯಿತು.

ಅಲ್ಲದೇ ಸಾಕ್ಷಿಯು ಮು.ಮಾ.8 ಮತ್ತು 10 ನ್ನು ನೋಡಿ ಗುರುತಿಸಿದ್ದು, ಅಲ್ಲದೇ ಮು.ಮಾ.9 ಮತ್ತು 11 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ.9(ಸಿ) ಮತ್ತು 11(ಸಿ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಮಧ್ಯಾಹ್ನ 3-00 ಗಂಟೆಗೆ ಕೆಟಿಜೆ ನಗರ ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಲಾಗಿದ್ದು, ಅಲ್ಲಿ ನನಗೆ ಆರೋಪಿತರನ್ನು ಗುರುತಿಸಲು ಚಾ.ಸಾ.23 ರವರು ಆದೇಶ ಮಾಡಿದ್ದು, ನಾನು ಠಾಣೆಯಲ್ಲಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸಿರುತ್ತೇನೆ. ಈ ಕುರಿತು ನಾನು ಹೇಳಿಕೆ ಹಾಗೂ ಮರುಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಸದರಿ ತ್ರಿಶೂಲ್ ಟಾಕೀಸಿನಿಂದ ಪಿಬಿ ರೋಡ್ ಗೆ 100 ಅಡಿ ಅಂತರ ಇರುತ್ತದೆ ಎಂದರೆ ಸಾಕ್ಷಿಯು 100 ಮೀಟರ್ ಅಂತರ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಿನ ನಾನು ಮನೆಗೆ ಇಲಾಖಾ ಜೀಪಿನಲ್ಲಿ ಹೋಗುತ್ತಿದ್ದೆ. ಆ ದಿನ ನನ್ನನ್ನು ಹೊರತುಪಡಿಸಿ ಜೀಪಿನಲ್ಲಿ ಬೇರೆ ಯಾರು ಇರಲಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನು ಸ್ಥಳಕ್ಕೆ ಹೋದಾಗ ಜನರು ಗುಂಪಾಗಿ ಸೇರಿದ್ದರು ಎಂದು ಪೋಲೀಸರಿಗೆ ಹೇಳಿದ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೋಗುವಷ್ಟರಲ್ಲಿ ಜನರು ಗುಂಪಾಗಿ ನಿಂತಿದ್ದು, ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಆರೋಪಿತರು ಇರಲಿಲ್ಲ ಎಂದರೆ ಸಾಕ್ಷಿಯು ಆರೋಪಿತರು ಇದ್ದು, ಅವರು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ನೋಡಿದ ಸಂದರ್ಭದಲ್ಲಿ ಆರೋಪಿತರಿಗೆ ಯಾವುದೇ ರಕ್ತ ಗಾಯ ಆಗಿರುವುದು ಕಂಡುಬಂದಿರುವುದಿಲ್ಲ. ಸದರಿಯವರು ಪಿಬಿ ರಸ್ತೆಯ ಕಡೆಗೆ ಓಡಿ ಹೋಗಿರುತ್ತಾರೆ. ನಾನು ಆ ಸಮಯದಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆಗೆ ದೂರವಾಣಿ ಮಾಡಿ ತಿಳಿಸಿಲ್ಲ, ಆದರೆ ಕಂಟ್ರೋಲ್ ರೂಂಗೆ ವಿಚಾರ ತಿಳಿಸಿರುತ್ತೇನೆ. ಸದರಿ ವಿಚಾರವನ್ನು ನಾನು ಪೋಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುವುದಿಲ್ಲ, ಆದರೆ ಚಾ.ಸಾ.23 ರವರಿಗೆ ಹೇಳಿರುತ್ತೇನೆ.

ನಾನು ಕೂಡಲೇ ಗಾಯಾಳು ಫ್ರಾ.ಸಾ.1 ರವರನ್ನು ನನ್ನ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಆಸ್ಪತ್ರೆಗೆ ಹೋಗುವ ಪ್ರಯತ್ನ ಮಾಡಿರುವುದಿಲ್ಲ. ಅಲ್ಲದೇ ಓಡಿ ಹೋಗುತ್ತಿರುವ ಆರೋಪಿತರನ್ನು ಹಿಡಿಯುವ ಪ್ರಯತ್ನ ಮಾಡಿರುವುದಿಲ್ಲ. ನಾನು ನೀಡಿದ ಪ್ರಥಮ ಹೇಳಿಕೆಯಲ್ಲಿ ಪೋಲೀಸರ ಸಮಕ್ಷಮ ಓಡಿ ಹೋದ ಆರೋಪಿತರ ಚಹರೆ, ಬಣ್ಣ, ವಯಸ್ಸು, ಅವರು ಧರಿಸಿದ್ದ ಬಟ್ಟೆಗಳ ಕುರಿತಾಗಿ ಹೇಳಿದ್ದು ಇರುವುದಿಲ್ಲ. ನಾನು ಆರೋಪಿತರನ್ನು ಠಾಣೆಯಲ್ಲಿ ನಂತರ ಗುರುತಿಸಿರುವುದಾಗಿ ಹೇಳಿದ್ದು, ಆ ಸಮಯದಲ್ಲಿಯೂ ನಾನು ಅವರಿಗೆ ಗಾಯ ಆಗಿರುವುದನ್ನು ನೋಡಿದ್ದು ಇರುವುದಿಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಆರೋಪಿತರನ್ನು ನೋಡಿ ಗುರುತಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ನಿ.ಪಿ.18 ಕ್ಕೆ ಠಾಣೆಯಲ್ಲಿಯೇ ಸಹಿ ಮಾಡಿದ್ದರೂ ಕೂಡ ಪೊಲೀಸರು ಘಟನಾ ಸ್ಥಳಕ್ಕೆ ಕರೆಯಿಸಿದ್ದರು, ಅಲ್ಲಿ ಪಂಚನಾಮೆ ಬರೆದು, ಫೋಟೋ ತೆಗೆದು, ಮು.ಮಾ.8 ಮತ್ತು 10 ನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ದಿನ ಇಲಾಖಾ ಜೀಪಿನೊಂದಿಗೆ ಸದರಿ ಸ್ಥಳದಲ್ಲಿ ಇದ್ದರೆ ನಾನು ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸುತ್ತಿದ್ದೆ, ಆ ರೀತಿ ಇಲ್ಲದ ಕಾರಣ ಆತನನ್ನು ಆಸ್ಪತ್ರೆಗೆ ದಾಖಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಆ ದಿನ ತಾನು ಇದ್ದು, ಆಟೋದ ಮೂಲಕ ಆತನನ್ನು ಆಸ್ಪತ್ರೆಗೆ ಕಳುಹಿಸಿದ್ದೇನೆ ಎಂದು ನುಡಿದಿರುತ್ತಾರೆ. ನಾನು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿ ಅಲ್ಲದೇ ಇದ್ದರೂ ಕೂಡ ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.19 ಮತ್ತು 20ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.11.21 13:44:37 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.